**ದಿಃ 26.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ವಾಯ್ ಎಸ್ ಎಮ್ ವಕೀಲರಿಂದ ಃ**

1 ನೇ ಪ್ರತಿವಾದಿಯ ಗಂಡ ರಾಮಯ್ಯನವರ ತಂದೆಯ ಹೆಸರು ರಂಗಪ್ಪ ಎಂದರೆ ಸರಿ. ನಿಪಿ-17 ರಲ್ಲಿ ಸರ್ವೇ ನಂ.253/3 ರಲ್ಲಿ 27 ಗುಂಟೆ ವಿಸ್ತೀರ್ಣ ಎಂದರೆ ಸರಿ. ನಿ.ಪಿ-17 ರಲ್ಲಿ ಎಮ್ ಎಸ್ ರಾಮಯ್ಯನವರಿಗೆ ಜಮೀನನ್ನು ಮಾರಾಟ ಮಾಡಿದ ಮಾರಾಟಗಾರರಾದ ರಾಮಯ್ಯನವರಿಗೆ ದಿನಾಂಕ 26.12.1960 ರಂದು ಅವರು ತಂದೆಯವರಾದ ರಂಗಪ್ಪನವರಿಂದ ದಾನಪತ್ರದ ಮೂಲಕ ಬಂದಿತ್ತು ಎಂದು ಬರೆಯಲಾಗಿದೆ ಎಂದರೆ ಸರಿ. ಸದರಿ ಸ್ವತ್ತು ರಾಮಯ್ಯನವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸರಿ. ರಾಮಯ್ಯನವರ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ಅವರ ಹೆಂಡತಿ ಮತ್ತು ಮಕ್ಕಳು ನಿಪಿ-17 ಕ್ಕೆ ಸಾಕ್ಷಿಗಳಾಗಿ ಆಗಿಲಿ ಅಥವಾ ಪಕ್ಷಗಾರರಾಗಿ ಆಗಿಲಿ ಸಹಿ ಮಾಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ.

ಸರ್ವೇ ನಂ.253/3 ಜಮೀನನ್ನು ಈ ದಾವೆಯಲ್ಲಿ ದಾವಾ ಆಸ್ತಿಯಾಗಿ ಮಾಡಿಲ್ಲ ಎಂದರೆ ಸರಿ. ಸರ್ವೇ ನಂ.253/3 ರ ಬಗ್ಗೆ ಹಾಗೂ ನಿಪಿ-17 ಮತ್ತು 19 ರ ಬಗ್ಗೆ ವಾದಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಸರ್ವೇ ನಂ.253/3 ಹಾಗೂ ದಾವಾ ಸ್ವತ್ತುಗಳು ರಾಮಯ್ಯ ಬಿನ್ ರಂಗಪ್ಪ ನವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದರಿಂದ ಸರ್ವೇ ನಂ.253/3 ನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ರಾಮಯ್ಯ ಬಿನ್ ರಂಗಪ್ಪ ನವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದರಿಂದ ವಾದಿ ಗೆ ಆಗಲಿ ಅಥವಾ ಆಕೆಯ ತಾಯಿ ಸಂಜಿವಮ್ಮ ರವರಿಗೆ ಆಗಲಿ ದಾವಾ ಸ್ವತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಜಂಟಿ ಸ್ವಾಧೀನದಲ್ಲಿ ನಾವು ಎಂದಿಗೂ ಇರದಿದ್ದರು ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿಇದ್ದೇವೆ ಎಂದು ವಾದಪತ್ರದಲ್ಲಿ ಸುಳ್ಳು ಮಾಹಿತಿ ನೀಡಿ ಸುಳ್ಳು ದಾವೆಯನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೋರಿರುವ ಪ್ರಾರ್ಥನೆಗೆ ವಾದಿ ಅನರ್ಹಳು ಎಂದರೆ ಸರಿಯಲ್ಲ.

ಈ ದಾವೆಯನ್ನು ವಾದಿಯು ದಿ.02.01.2008 ರಂದು ಭಾಗಾಂಶ ಕೋರಿ ಸಲ್ಲಿಸಿರುತ್ತಾರೆಂದರೆ ಸರಿ. ದಾವಾ ಸ್ವತ್ತು 1 ರಿಂದ 3 ರವರೆಗೆ ಒಟ್ಟು 3 ಎಕರೆ 17.12 ಗುಂಟೆ ಎಂದರೆ ಸರಿ. ದಾವಾ ಸ್ವತ್ತುಗಳು ಕರ್ನಾಟಕ ರಾಜ್ಯ ಪ್ರಪತ್ರ ಅಧಿಸೂಚನೆಯಂತೆ ದಿ.04.09.2006 ರಿಂದ ದಿ.12.02.2008 ನಂತರ ಅರಳುಮಲ್ಲಿ ಗ್ರಾಮದಲ್ಲಿ 1 ಎಕರೆ ಜಮೀನಿನ ಮೌಲ್ಯ ರೂ.25 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ಈ ದಾವಾಯನ್ನು ದಾಖಲಿಸುವ ಸಂದರ್ಭದಲ್ಲಿ ದಾವಾ ಸ್ವತ್ತುಗಳ ಮೌಲ್ಯವನ್ನು ತಿಳಿಸುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರು. ದಾವಾ ಸ್ವತುಗಳ ಐಟಂ ನಂ.1 ರಿಂದ 3

ಒಟ್ಟು ಮೌಲ್ಯ ಎಕರೆಗೆ 25 ಲಕ್ಷದಂತೆ ಒ್ಟಟು ರೂ.85,62,500/- ಆಗುತ್ತದೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನಲ್ಲಿ ಅರ್ಧ ಭಾಗಕ್ಕಾಗಿ ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿ. ವಾದಿಯು ಕೋರಿರುವ ಭಾಗದ ಮೌಲ್ಯ ರೂ.42,81,250/- ಆಗುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಐಟಂ ನಂ.4 ರ ಒಟ್ಟು ಮೌಲ್ಯ ಚದರ ಅಡಿ ರೂ.150/- ರಂತೆ 2 ಲಕ್ಷ 20 ಸಾವಿರದ ಐನೂರು ಆಗುತ್ತದೆ ಸರಿಯಲ್ಲ. ವಾದಿಯ ಅರ್ಧ ಭಾಗದ ಮೌಲ್ಯ ರೂ.1,10,250/- ಆಗುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾಸ್ವತ್ತುಗಳ ಒಟ್ಟು ಮೌಲ್ಯ ರೂ.43,91,500/- ಆಗುತ್ತದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಈ ನ್ಯಾಯಾಲಯದ ಮುಂದೆ ಪರಿಹಾರ ಪಡೆದುಕೊಳ್ಳಲು ವ್ಯಾಪ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು)**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**